# ಯುವಸ್ಪಂದನ

## ನಮ್ಮ ಪ್ರಶ್ನೆಗಳಿಗೆ ನಿಮ್ಮ ಉತ್ತರ

### ದೇಶೋದ್ಧಾರದಲ್ಲಿ ವಿದ್ಯಾರ್ಥಿಗಳ ಪಾತ್ರವೇನು?

ದೇಶೋದ್ಧಾರದಲ್ಲಿ ವಿದ್ಯಾರ್ಥಿಗಳ ಪಾತ್ರ ಬಹಳ ಮಹತ್ವವಾದುದು. ನಮ್ಮ ಸಮಾಜದಲ್ಲಿ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರ, ಅವ್ಯವಹಾರ, ಭ್ರಷ್ಟಾಚಾರದ ವಿರುದ್ಧ ವಿದ್ಯಾರ್ಥಿಗಳು ಒಗ್ಗೂಡಿ ಹೋರಾಡಿದರೆ ಇದನ್ನು ನಮ್ಮ ಸಮಾಜದಿಂದ ತೊಲಗಿಸಲು ನಮಗೆ ಹೆಚ್ಚು ಸಮಯ ಬೇಕಾಗದು. ನಮ್ಮಂತಹ ವಿದ್ಯಾರ್ಹತೆಯುಳ್ಳವರು ಇಂತಹ ಪಿಡುಗುಗಳ ಬಗ್ಗೆ ಆಲೋಚಿಸದಿದ್ದಲ್ಲಿ ನಮ್ಮ ಸಮಾಜದಿಂದ ಇವುಗಳನ್ನು ಎಂದೂ ಹೋಗಲಾಡಿಸಲು ಸಾಧ್ಯವಿಲ್ಲ ಹಾಗೂ ಇದೇ ನಮ್ಮ ಮುಂದಿನ ಪೀಳಿಗೆಗೆ ಅಡಿಪಾಯವಾಗಿ ಪರಿಣಮಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ.

**ರಣಜಿತ್ .ಐ.ಆರ್. ಪ್ರಥಮ ಪಿ.ಯು.ಸಿ.,**
**ಶಾರದಾ ವಿಲಾಸ ಕಾಲೇಜು, ಮೈಸೂರು**

ಪ್ರತಿಯೊಬ್ಬರಿಗೂ ತನ್ನ ದೇಶದ ಬಗ್ಗೆ ವಿಶೇಷ ಗೌರವ ಇರಬೇಕು. ತನ್ನ ದೇಶಕ್ಕಾಗಿ ಶ್ರದ್ಧೆಯಿಂದ ಕೆಲಸ ಮಾಡಬೇಕು. ದೇಶಭಕ್ತಿ ಪ್ರದರ್ಶಿಸಬೇಕಾದ ವಸ್ತುವಲ್ಲ. ಕೃತಿಯ ಮೂಲಕ ಅದು ವ್ಯಕ್ತವಾಗಬೇಕು. ದೇಶಪ್ರೇಮ ಎಂದರೇನು ಎಂಬುದನ್ನು ಮನವರಿಕೆ ಮಾಡಿಕೊಂಡು ದೇಶಕ್ಕಾಗಿ ಶ್ರಮಿಸಬೇಕು. ಇದನ್ನು ವಿದ್ಯಾರ್ಥಿಗಳು ಈ ವಯಸ್ಸಿನಿಂದಲೇ ಬೆಳಸಿಕೊಳ್ಳಬೇಕು. ದೇಶಕ್ಕಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಿರಬೇಕು. ಅನ್ಯಾಯ, ಹಿಂಸೆಗಳನ್ನು ಬದಿಗೊತ್ತಿ ಸರ್ವರಲ್ಲಿಯೂ ಸಮಾನತೆ ಕಾಪಾಡಬೇಕು. ದೇಶ ನನಗೇನು ಮಾಡಿತು ಎಂದು ಕೇಳದೆ ನಾನು ದೇಶಕ್ಕೇನು ಮಾಡಿದೆ ಎಂದು ತನ್ನನ್ನು ತಾನೇ ಕೇಳಿಕೊಳ್ಳುತ್ತಾ ದೇಶಸೇವೆಯಲ್ಲಿ ಭಾಗಿಯಾಗಬೇಕು. ಮುಷ್ಕರ, ಜಾತಿ ಗಲಭೆ ಅಥವಾ ಇತರೆ ಗಲಭೆಗಳು, ಭಯೋತ್ಪಾದಕತೆ ಮುಂತಾದವುಗಳಿಗೆ ಆಸ್ಪದ ಕೊಡದೆ ಶಾಂತಿ ಕಾಪಾಡಬೇಕು. ಹೇಗೆ ನಮ್ಮ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುತ್ತೇವೊ ಅದೇ ರೀತಿ ದೇಶವನ್ನು ಕೂಡ ಸ್ವಚ್ಛವಾಗಿಟ್ಟುಕೊಳ್ಳಬೇಕು. ತನ್ನ ಸುತ್ತಮುತ್ತಲಿನ ಜನರೊಂದಿಗೆ ಸ್ನೇಹ, ಸೌಹಾರ್ದ ಮತ್ತು ಸದ್ಭಾವನೆಯಿಂದ ವರ್ತಿಸಬೇಕು. ಯಾರನ್ನೂ ದ್ವೇಷಿಸದೆ ಸ್ನೇಹಮಯವಾಗಿ ನೋಡಬೇಕು. ಎಲ್ಲಾ ಜಾತಿ, ಧರ್ಮ, ಭಾಷೆ ಮತ್ತು ಪ್ರಾಂತ್ಯಗಳನ್ನು ಪ್ರೀತಿಸಬೇಕು. ಬಡವ ಸಿರಿವಂತರೆಂಬ ಭೇದಭಾವ ತೋರದೆ ದೇಶಕ್ಕೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಬೇಕು. ಪ್ರತಿಯೊಬ್ಬರ ದೇಶಪ್ರೇಮದಿಂದ ದೇಶೋದ್ಧಾರ ಸಾಧ್ಯ.

**—ಭಾಗ್ಯ. ಎಚ್. ಎಸ್, ದ್ವಿತೀಯ ಪಿ.ಯು.ಸಿ (ಪಿ.ಸಿ.ಎಂ.ಬಿ),**
**ಜೆ.ಎಸ್.ಎಸ್.ಮಹಿಳಾ ಕಾಲೇಜು, ಮೈಸೂರು.**



# ಯುವವೇದಿಕೆ

ವಿದ್ಯಾರ್ಥಿಗಳು ಸೋಮಾರಿಗಳಾಗದೆ ತಮ್ಮ ತನು ಮನ ಧನಗಳನ್ನು ದೇಶದ ಉದ್ಧಾರಕ್ಕಾಗಿ ಅರ್ಪಿಸಬೇಕು. ದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಎಲ್ಲಾ ರಂಗದಲ್ಲಿಯೂ ತನ್ನನ್ನು ಬಳಸಿಕೊಂಡು ದೇಶದ ಏಳಿಗೆಗೆ ಶ್ರಮಿಸಿ ದೇಶವನ್ನು ಮಾದರಿ ರಾಷ್ಟ್ರವನ್ನಾಗಿ ಮಾಡಬೇಕು. ರಾಷ್ಟ್ರ ನಾಯಕರ ಜೀವನಧ್ಯೇಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇದರ ಮೂಲಕ ಉನ್ನತ ನಡವಳಿಕೆಯನ್ನು ಮೈಗೂಡಿಸಿಕೊಂಡು ವಿದ್ಯಾರ್ಥಿಯು ವಿದ್ಯಾವಂತನಾಗಿ ತನ್ನ ಕುಟುಂಬದ ಅಭಿವೃದ್ಧಿಗೂ ರಾಷ್ಟ್ರದ ಅಭಿವೃದ್ಧಿಗೂ ಶ್ರಮಿಸಬೇಕು. ಉನ್ನತ ವಿದ್ಯೆ, ಉಜ್ವಲ ದೇಶಪ್ರೇಮ ಮತ್ತು ಬುದ್ಧಿಶಕ್ತಿಯಿಂದ ಯಾವ ಉದ್ಯೋಗವನ್ನು ಮಾಡಿದರೂ ತನ್ಮೂಲಕ ರಾಷ್ಟ್ರದ ಅಭಿವೃದ್ಧಿಯಾಗುವುದು. ಉತ್ತಮ ರಾಜಕೀಯ ನಡವಳಿಕೆಯಿಂದ ರಾಷ್ಟ್ರಹಿತ ಚಿಂತನೆಯ ಮೂಲಕವೂ ಉತ್ತಮ ವ್ಯಕ್ತಿಗಳನ್ನು ಪ್ರಜಾಪ್ರತಿನಿಧಿಗಳನ್ನಾಗಿ ಚುನಾಯಿಸುವುದರ ಮೂಲಕವೂ ದೇಶಸೇವೆ ಮಾಡಬೇಕು. **—ಜಿ.ಎಸ್. ನಾಗಲಕ್ಷ್ಮಿ, ದ್ವಿತೀಯ ಬಿ. ಎಸ್ಸಿ.,**
**ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' (ತಾಯಿ ಹಾಗೂ ತಾಯ್ನಾಡು ಸ್ವರ್ಗಕ್ಕಿಂತಲೂ ಮಿಗಿಲು) ಎಂದು ನಮ್ಮ ಪೂರ್ವಜರು ಧರ್ಮಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಜನ್ಮಭೂಮಿಗೆ ನಮ್ಮ ಸಂಸ್ಕೃತಿಯಲ್ಲಿ ತಾಯಿಯ ಸ್ಥಾನ ನೀಡಲಾಗಿದೆ. ಅದರ ಉದ್ಧಾರ ವಿದ್ಯಾರ್ಥಿಗಳು ಮಾಡಲೇಬೇಕಾದ ಕರ್ತವ್ಯ.

ನಮ್ಮದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ. ಬಡತನ, ನಿರಕ್ಷರತೆ, ನಿರುದ್ಯೋಗ ಸಮಸ್ಯೆಗಳು ಅಭಿವೃದ್ಧಿಯ ದಿಸೆಯತ್ತ ಕಷ್ಟಪಟ್ಟು ಸಾಗುತ್ತಿರುವ ನಮ್ಮ ರಾಷ್ಟ್ರದ ಹಾದಿಗೆ ಹೆಬ್ಬಂಡೆಗಳಾಗಿ ಪರಿಣಮಿಸಿವೆ. ಈ ಮೂಲಭೂತ ಸಮಸ್ಯೆಗಳನ್ನು ನಿವಾರಿಸಲು ನಾವು ಮುಖ್ಯವಾಗಿ ಪ್ರಯತ್ನಿಸಬೇಕಾಗಿದೆ.

ಈ ದಿಸೆಯಲ್ಲಿ ಮಹಾತ್ಮಾ ಗಾಂಧೀಜಿಯವರ ಆಶಯದಂತೆ ನಮ್ಮ ವಿದ್ಯಾರ್ಥಿಗಳು ವಿದ್ಯಾರ್ಜನೆಯ ನಂತರ ಕೆಲಸಕ್ಕಾಗಿ ನಗರಗಳಲ್ಲಿ ನಿರರ್ಥಕವಾಗಿ ಅಲೆಯದೆ, ತಾವು ಜನ್ಮ ತಳೆದ ಗ್ರಾಮಗಳಿಗೆ ಹೋಗಿ ವ್ಯವಸಾಯ ಹಾಗು ಇನ್ನಿತರ ಕಸುಬುಗಳ ಜೊತೆ, ತಮ್ಮ ಜನಗಳ ಉದ್ಧಾರಕ್ಕೋಸ್ಕರ ಸ್ವಲ್ಪ ಮಟ್ಟಿಗಾದರೂ ಶ್ರಮಿಸಬೇಕು. ಆಗ ಮಾತ್ರ ನಮ್ಮ ದೇಶದ ಸಂಪೂರ್ಣ ಉದ್ಧಾರ ಸಾಧ್ಯ. ನಿಜ, ಆದರ್ಶಗಳನ್ನು ಹೇಳುವುದು ಸುಲಭ, ಆದರೆ ಪಾಲಿಸುವುದು ಕಷ್ಟ. ಹಾಗಂತ ಅಸಾಧ್ಯವಲ್ಲ. ನಮ್ಮಲ್ಲಿ ಸ್ವಲ್ಪ ಮಂದಿ ವಿದ್ಯಾರ್ಥಿ

ಗಳಾದರೂ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರೆ ನಮ್ಮ ದೇಶೋದ್ಧಾರದ ಕನಸು ನನಸಾಗುವ ಕಾಲ ದೂರವಿಲ್ಲ.

ದೇಶೋದ್ಧಾರ ಮಾಡಲು ಪ್ರತಿಯೊಬ್ಬ ವಿದ್ಯಾರ್ಥಿಯು ಮಹಾತ್ಮಾಗಾಂಧಿ, ಸ್ವಾಮಿ ವಿವೇಕಾನಂದ, ಅಣ್ಣಾ ಹಜಾರೆಯಾಗ ಬೇಕೆಂದೇನಿಲ್ಲ. ಆತ ಮೊದಲು ತನ್ನ ಕರ್ತವ್ಯವನ್ನು ಪಾಲಿಸಬೇಕು. ವಿದ್ಯಾರ್ಥಿಯಾಗಿ ಆತನ ಕೆಲಸ ವಿದ್ಯಾರ್ಜನೆ. ಅದನ್ನು ಶ್ರದ್ಧೆಯಿಂದ ಮಾಡಬೇಕು.

ಈವತ್ತು ನಮ್ಮ ಸರ್ಕಾರ ಶಿಕ್ಷಣಕ್ಕಾಗಿ ಸಾವಿರಾರು ಕೋಟಿ ಹಣವನ್ನು ವ್ಯಯಿಸುತ್ತಿದೆ. ಈ ದೇಶದ ಸವಲತ್ತು ರಿಯಾಯಿತಿ ಗಳನ್ನು ಬಳಸಿಕೊಂಡು ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಕೇವಲ ಹೆಚ್ಚಿನ ಹಣದಾಸೆಗೋಸ್ಕರ ವಿದೇಶಗಳಿಗೆ ಹೋಗಬಾರದು. ನಮಗೆ ಜನ್ಮಕೊಟ್ಟು, ವಿದ್ಯೆಕೊಟ್ಟು, ಯೋಚಿಸಲು ಕಲಿಸಿದ ದೇಶಕ್ಕೆ ನಮ್ಮ ಸೇವೆಯನ್ನು ಸಲ್ಲಿಸಿ ಕೊಂಚಮಟ್ಟಿಗಾದರೂ ಋಣಭಾರವನ್ನು ಇಳಿಸಿಕೊಳ್ಳಬೇಕೆಂಬ ವಿಚಾರ ಅವರ ಚಿಂತನೆಗೆ ಬರಬೇಕು. ನಿಜ, ನಮ್ಮ ದೇಶದಲ್ಲಿ ಹಣ ಕಡಿಮೆ ಸಿಗಬಹುದು, ಹೊರದೇಶದಲ್ಲಿ ಸಿಗುವಂತ ಐಶಾರಾಮತೆ ಸಿಗದಿರಬಹುದು. ನಮ್ಮ ದೇಶಕ್ಕಾಗಿ ದುಡಿದೆ ಎನ್ನುವ ಹೆಮ್ಮೆ ಇರುತ್ತದೆ, ನೆಮ್ಮದಿ ಸಿಗುತ್ತದೆ. ಆದರೆ ಹೊರದೇಶದ ಏಳ್ಗೆಗೆ ದುಡಿದಾಗ ಕೇವಲ ಹಣಮಾತ್ರ ದೊರೆ ಯುತ್ತದೆ. ಕರಿಬೇವಿನ ಸ್ಥಿತಿ ನಮ್ಮದಾಗುತ್ತದೆ.

**—ಆರ್. ಬಸವರಾಜು, ಪ್ರಥಮ ಬಿ.ಎಸ್ಸಿ., ಜೆ.ಎಸ್.ಎಸ್.ಕಾಲೇಜು, ಮೈಸೂರು.**

ದೇಶೋದ್ಧಾರದಲ್ಲಿ ಯುವಜನರು ಮಹತ್ವದ ಪಾತ್ರ ವಹಿಸು ತ್ತಾರೆ. ಯುವಜನರು ದುಶ್ಚಟಗಳಿಗೆ ಬಲಿಯಾಗದೆ ದೇಶದ ಸರ್ವಾಂಗೀಣ ಪ್ರಗತಿಗೆ ಶ್ರಮಿಸಬೇಕು. ಕಲೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ಎಲ್ಲಾ ರಂಗಗಳಲ್ಲಿಯೂ ಅವರು ಕೆಲಸ ಮಾಡಿ ದೇಶದ ಕೀರ್ತಿ ಎಲ್ಲಾ ಕಡೆಯೂ ಹಬ್ಬುವಂತೆ ಮಾಡಬೇಕು. ಉನ್ನತ ಶಿಕ್ಷಣ ಪಡೆದ ಯುವಕರು ಪರದೇಶದ ವ್ಯಾಮೋಹಕ್ಕೆ ಸಿಲುಕಿ ಸ್ವದೇಶವನ್ನು ಮರೆತು, ವಿದೇಶಕ್ಕೆ ಹೋಗುತ್ತಾರೆ. ಇದು ದೊಡ್ಡ ದೇಶದ್ರೋಹ. ಯುವಜನರು ತಮ್ಮ ಶಕ್ತಿ, ಸಾಮರ್ಥ್ಯ, ಪ್ರತಿಭೆಯನ್ನು ಈ ದೇಶ ದಲ್ಲಿ ತೋರಿಸಿ, ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕು. ಆದರೆ ಇದು ತಪ್ಪು. ಯುವಜನತೆ ಹೆಚ್ಚಾಗಿ ವ್ಯವಸಾಯಕ್ಕೆ ಪ್ರಾಶಸ್ತ್ಯ ಕೊಡಬೇಕು. ವ್ಯವಸಾಯದಲ್ಲಿ ಆಧುನಿಕ ಮಾರ್ಗವನ್ನು ಅನುಸರಿಸಿ ಬೇಸಾಯ ಮಾಡಿ, ಹೆಚ್ಚಿನ ಇಳುವರಿ ಗಳಿಸಿ, ದೇಶದಲ್ಲಿರುವ ಆಹಾರದ ಸಮಸ್ಯೆಯನ್ನು ನೀಗಿಸಬೇಕು. ದೇಶದಲ್ಲಿ ಕಾರ್ಖಾನೆಗಳ ಅಭಿವೃದ್ಧಿಗೆ ಯುವಜನತೆ ಶ್ರಮಿಸಬೇಕು. ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಆವಿಷ್ಕಾರ ಮಾಡಿ, ಹೊಸ, ಹೊಸ ಅನ್ವೇಷಣೆಯನ್ನು ಮಾಡಿ ಭಾರತದ ಕೀರ್ತಿಪತಾಕೆಯನ್ನು ಹಾರಿಸಬೇಕು. ಕ್ರೀಡೆಗಳಲ್ಲಿ ಹೆಚ್ಚಾಗಿ ಯುವಜನತೆ ಭಾಗವಹಿಸಬೇಕು. ರಾಷ್ಟ್ರಮಟ್ಟದ ಕ್ರೀಡೆ ಗಳಲ್ಲಿ ಭಾಗವಹಿಸಿ, ಗೆದ್ದು ರಾಷ್ಟ್ರದ ಧ್ವಜವನ್ನು ಹೆಮ್ಮೆಯಿಂದ ವಿದೇಶಗಳಲ್ಲಿ ಹಾರಿಸಬೇಕು. ಯುವಜನತೆ ದೇಶದಲ್ಲಿ ಅಂತರ ಕಲಹಕ್ಕೆ ಎಡೆಮಾಡಿಕೊಡಬಾರದು. ಮತ, ಜಾತಿ, ಧರ್ಮದ ನೆಪವೊಡ್ಡಿ ನಮ್ಮ ಐಕ್ಯತೆಗೆ ಧಕ್ಕೆಯುಂಟುಮಾಡುವ ಕಲಹವನ್ನು ಎಂದೂ ಪ್ರೋತ್ಸಾಹಿಸಬಾರದು. ಸ್ವತಃ ಗಾಂಧೀಜಿಯವರ ಹೇಳಿಕೆಯಂತೆ, **'ಭಾರತ ಹಳ್ಳಿಗಳ ದೇಶ, ಹಳ್ಳಿಗಳ ಅಭಿವೃದ್ಧಿ ಯಲ್ಲೇ ದೇಶದ ಅಭಿವೃದ್ಧಿ ಇದೆ'** ಎಂಬ ಮಾತು ನಿಜವಾಗಬೇಕು. ದೇಶದಲ್ಲಿರುವ ಅನಕ್ಷರತೆ, ಮೂಢನಂಬಿಕೆ ಹೋಗಲಾಡಿಸಲು ಯುವ ಜನತೆ ಹೆಗಲುಕೊಟ್ಟು ಕೆಲಸ ಮಾಡಬೇಕು. ದೇಶದಲ್ಲಿ ಕ್ಷಾಮ, ಪ್ರವಾಹ, ಬರಗಾಲ, ಭೂಕಂಪ ಇನ್ನಿತರ ಸಂಕಷ್ಟಗಳಲ್ಲಿ ಯುವ ಜನತೆ ಸ್ವಯಂಪ್ರೇರಿತರಾಗಿ ಮುಂದೆ ಬಂದು ದೇಶಕ್ಕಾಗಿ, ನೊಂದವ ರಿಗಾಗಿ, ಕೆಲಸಮಾಡುವುದು. ಹೀಗೆ ಯುವಜನತೆ ಮನಸ್ಸು ಮಾಡಿ ದರೆ ಸ್ವರ್ಗವನ್ನು ದೇಶಕ್ಕಿಳಿಸಬಹುದು.

**—ಭಾಗ್ಯಲಕ್ಷ್ಮಿ. ಎಚ್., ಅಂತಿಮ ಬಿ.ಎಸ್ಸಿ (ಪಿ.ಎಂ.ಸಿ), ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

ದೇಶೋದ್ಧಾರದಲ್ಲಿ ವಿದ್ಯಾರ್ಥಿಗಳದೇ ಪ್ರಮುಖ ಪಾತ್ರವಿದೆ. ದೇಶವನ್ನು ಅಭಿವೃದ್ಧಿಗೊಳಿಸುವಲ್ಲಿ ವಿದ್ಯಾರ್ಥಿಯ ಪಾತ್ರದ ಬಗ್ಗೆ ಚಿಕ್ಕಂದಿನಿಂದಲೇ ಅವರಿಗೆ ತಿಳಿಸಿಹೇಳಬೇಕಾದ ಅನಿವಾರ್ಯತೆ ಇದೆ. ಈ ದೇಶ ನನ್ನದು, ಈ ದೇಶ ನನ್ನ ಆಸ್ತಿ, ನನ್ನ ಪ್ರಥಮ ಕರ್ತವ್ಯ ದೇಶೋದ್ಧಾರ ಎಂಬ ಭಾವನೆಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುತ್ತಾ ಹೋಗಬಹುದು. ವಿದ್ಯಾವಂತನಾದವನು ಮಾತ್ರ ದೇಶವನ್ನು ಸನ್ಮಾರ್ಗದಲ್ಲಿ ನಡೆಸಲು ಸಾಧ್ಯವೇ ಹೊರತು ಅವಿದ್ಯಾವಂತರಿಂದ ಸಾಧ್ಯವಿಲ್ಲ. ದೇಶೋದ್ಧಾರ ಅಂದರೆ ಸಾಮಾಜಿಕವಾಗಿ, ಶೈಕ್ಷಣಿಕ ವಾಗಿ, ಆರ್ಥಿಕವಾಗಿ, ವೈಜ್ಞಾನಿಕವಾಗಿ ದೇಶ ಮುಂದೆ ಬರಬೇಕು. ಅದಕ್ಕೆ ಅಗತ್ಯ ವಿದ್ಯೆ ಇರಬೇಕು. ಅಂತಹ ವಿದ್ಯೆಯನ್ನು ವಿದ್ಯಾರ್ಥಿ ಗಳು ಸಂಪಾದಿಸಬೇಕು. ಇದೇ ಇವರು ವಹಿಸಬೇಕಾದ ಪ್ರಥಮ ಕರ್ತವ್ಯ.

**—ಮಂಜುನಾಥ. ಕೆ. ದ್ವಿತೀಯ ಬಿ.ಫಾರ್ಮ, ಜೆ.ಎಸ್.ಎಸ್ ಫಾರ್ಮಸಿ ಕಾಲೇಜು, ಮೈಸೂರು**

ಒಂದು ದೇಶದ ಉದ್ಧಾರಕ್ಕೆ ಕಾರಣವಾಗುವ ಅಂಶಗಳು ಯಾವುವೆಂದರೆ, ಆ ದೇಶದ ನಾಗರಿಕರು ದುಡಿಮೆಯೇ ದೇವರೆಂದು ನಂಬಿ ದುಡಿಮೆಯಿಂದಲೇ ಜೀವಿಸುವುದು, ನೈಸರ್ಗಿಕ ಸಂಪ ನ್ಮೂಲಗಳ ಸದ್ಬಳಕೆ, ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು, ಕಿರಿಯರು ಹಿರಿಯರನ್ನು ಗೌರವಿಸುವುದು ಮತ್ತು ಸಹಕಾರ ಮನೋ ಭಾವ. ದೇಶದ ಎಲ್ಲಾ ನಾಗರಿಕರಲ್ಲೂ ಎಂದಿಗೆ ಈ ಗುಣಗಳು ಉಂಟಾಗುವುವೋ ಅಂದೇ ಆ ದೇಶ ಉದ್ಧಾರವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಯು ಸಹ ಈ ಗುಣಗಳನ್ನು ಮೈಗೂಡಿಸಿಕೊಂಡಲ್ಲಿ ಆತ ದೇಶೋದ್ಧಾರಕನೆನಿಸಬಲ್ಲ.

ಅಂದರೆ ಗುಂಪುಗಾರಿಕೆಯಿಂದ ದೂರವಿರುವುದು, ಮಹಾನ್ ವ್ಯಕ್ತಿ ಗಳಿಗೆ ಗೌರವ ಕೊಡುವುದು, ಅವರ ಆದರ್ಶಗಳನ್ನು ತಾವೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುವುದು ಹಾಗೂ ಅನಿ ರೀಕ್ಷಿತ ಸಂದರ್ಭಗಳಲ್ಲಿ ರಾಷ್ಟ್ರರಕ್ಷಣೆಗಾಗಿ ಪ್ರಾಣ ತೆರಲು ಕೂಡ ಹಿಂಜರಿಯದ ಸಿದ್ಧ ಮನೋಭಾವವನ್ನು ಬೆಳೆಸಿಕೊಳ್ಳುವುದು — ಇದೇ ದೇಶೋದ್ಧಾರದಲ್ಲಿ ವಿದ್ಯಾರ್ಥಿ ಮಾಡಬಹುದಾದ ಕೆಲಸ.

**—ಸಿರಿದೇವಿ ಹೆಚ್. ಎಸ್., ಅಂತಿಮ ಬಿ.ಎಸ್ಸಿ., ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳಲ್ಲೇ ದೇಶವನ್ನು ಅಧೋಗತಿಗೆ ತಂದಿರುವ ರಾಜಕಾರಣಿಗಳು ಮತ್ತು ಅಧಿಕಾರಿಗಳ ಮಧ್ಯೆ ಬಡ ವಿದ್ಯಾರ್ಥಿಗಳು ದೇಶೋದ್ಧಾರ ಮಾಡುವುದಾದರೂ ಹೇಗೆ? ವಿದ್ಯಾಭ್ಯಾಸ ಮುಗಿಸಿದ ನಂತರ ನಿರುದ್ಯೋಗಿಗಳಾಗಿಯೇ ಉಳಿದು ತಮ್ಮ ಉದ್ಧಾರವನ್ನು ಮಾಡಿಕೊಳ್ಳುವುದೇ ಅವರಿಗೆ ಸಾಕು ಸಾಕಾಗಿ ಹೋಗುತ್ತದೆ. ದೇಶದ ಸಂಪೂರ್ಣ ವ್ಯವಸ್ಥೆಯೇ ಹದಗೆಟ್ಟಿರುವಾಗ ವಿದ್ಯಾರ್ಥಿಗಳು ಏನು ಮಾಡಲು ಸಾಧ್ಯ? ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ಮಾಡುವ ನಿಸ್ವಾರ್ಥ ಗುರುಗಳಾಗಲೀ, ಮುಖಂಡರಾಗಲೀ ಎಲ್ಲಿದ್ದಾರೆ? ವಿದ್ಯಾರ್ಥಿಗಳಿಗೇ ಮಾರ್ಗದರ್ಶನ ಇಲ್ಲದಿರುವಾಗ ದೇಶೋದ್ಧಾರವನ್ನು ಹೇಗೆ ಮಾಡಿಯಾರು? ನಿಸ್ವಾರ್ಥರಾದ ಒಂದು ಅಥವಾ ಎರಡು ಪೀಳಿಗೆ ಎಲ್ಲವನ್ನೂ ತ್ಯಾಗ ಮಾಡಿ ದೇಶದ ಹಿತಕ್ಕಾಗಿ ದುಡಿದರೆ ಮಾತ್ರ ನಮ್ಮ ದೇಶ ಉದ್ಧಾರವಾದೀತು. ಸಕಲವನ್ನೂ ತಮ್ಮ ಮತ್ತು ತಮ್ಮ ಕುಟುಂಬದ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಜನರ ಮಧ್ಯೆ ನಾವು ವಿದ್ಯಾರ್ಥಿಗಳಿದ್ದೇವೆ! ನಾವೇನು ಮಾಡಲು ಸಾಧ್ಯ?

—ಉಷಾರಾಣಿ. ಆರ್., ದ್ವಿತೀಯ ಎಲ್.ಎಲ್‌ಬಿ.,
ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು

## ನಮ್ಮ ದೇಶಬಾಂಧವರೇ, ಅಮೃತಪುತ್ರರೇ!

ನಮ್ಮ ದೇಶಬಾಂಧವರೇ, ಅಮೃತಪುತ್ರರೇ! ಈ ಜನಾಂಗದ ಹಡಗು ಹಲವು ಶತಮಾನಗಳಿಂದ ಸಂಚರಿಸುತ್ತಿದೆ. ಅನರ್ಘ್ಯ ರತ್ನದಂತಿರುವ ಸಂಸ್ಕೃತಿಯನ್ನು ಇತರ ದೇಶಗಳಿಗೆ ಹೊತ್ತು ಜಗತ್ತನ್ನೇ ಉತ್ತಮಸ್ಥಾನಕ್ಕೆ ತರುತ್ತಿದೆ. ಈ ಜನಾಂಗವೆಂಬ ನಮ್ಮ ನೌಕೆ ಹಲವು ಶತಮಾನಗಳಿಂದ ಕೋಟ್ಯಂತರ ಜೀವಿಗಳನ್ನು ಭವಸಾಗರದ ಆಚೆ ದುಃಖಾತೀತ ಸ್ಥಿತಿಗೆ ಕೊಂಡೊಯ್ದಿದೆ. ಆದರೆ ಇಂದು ನಮ್ಮ ತಪ್ಪಿನಿಂದಲೋ, ಅಥವಾ ಮತ್ತಾವ ಕಾರಣದಿಂದಲೋ, ಈ ಹಡಗು ಸೋರಲು ಮೊದಲಾಗಿ ಅದಕ್ಕೆ ಅಪಾಯ ಒದಗಿರಬಹುದು. ಅದರಲ್ಲಿರುವ ನೀವು ಈಗ ಏನು ಮಾಡಬಲ್ಲಿರಿ? ಅದನ್ನು ದೂರುತ್ತ ನಿಮ್ಮ ನಿಮ್ಮಲ್ಲೇ ಜಗಳ ಕಾಯುವಿರೇನು? ನೀವೆಲ್ಲ ಕಲೆತು ಆ ರಂಧ್ರವನ್ನು ಮುಚ್ಚಲು ಸಾಧ್ಯವಾದಷ್ಟು ಪ್ರಯತ್ನಪಡುವುದಿಲ್ಲವೆ? ನಮ್ಮ ಹೃದಯದ ರಕ್ತವನ್ನು ಸಂತೋಷದಿಂದ ಇದಕ್ಕೆ ಅರ್ಪಿಸೋಣ. ನಮ್ಮ ಪ್ರಯತ್ನದಲ್ಲಿ ವಿಫಲರಾದರೆ ನಾವೆಲ್ಲ ಕಲೆತು ಯಾರನ್ನೂ ಶಪಿಸದೆ ಆಶೀರ್ವಾದವನ್ನು ಉಚ್ಚರಿಸುತ್ತ ಒಟ್ಟಿಗೆ ಮುಳುಗೋಣ.

ಯಾರ ನಾಡಿನಾಡಿಗಳಲ್ಲಿ ಅದ್ಭುತ ರಾಜಸ ಸ್ವಭಾವ ತುಂಬಿ ತುಳುಕಾಡುತ್ತಿದೆಯೊ, ಯಾರು ಸತ್ಯಸಾಕ್ಷಾತ್ಕಾರಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಲು ಸಿದ್ಧರಾಗಿರುವರೊ, ಯಾರಿಗೆ ತ್ಯಾಗವೇ ಆಯುಧವಾಗಿದೆಯೊ, ಧರ್ಮವೇ ಖಡ್ಗವಾಗಿದೆಯೊ ಅಂತಹವರು ದೇಶಕ್ಕೆ ಬೇಕಾಗಿದ್ದಾರೆ. ನಮಗಿಂದು ಬೇಕಾಗಿರುವುದು ಜೀವನಸಂಗ್ರಾಮದಲ್ಲಿ ಹೋರಾಡುತ್ತಿರುವ ಯೋಧನ ಕೆಚ್ಚೆದೆಯ ಭಾವ ; ಜೀವನವನ್ನು ಭೋಗೋದ್ಯಾನದಂತೆ ನೋಡುವ ವಿಲಾಸಿಯ ಭಾವವಲ್ಲ.

...ನೀವು ನಿಜವಾಗಿಯೂ ನನ್ನ ಸುತರೇ ಆಗಿದ್ದರೆ ನೀವು ಯಾವುದಕ್ಕೂ ಅಂಜುವುದಿಲ್ಲ, ಏನೇ ಆದರೂ ಕೆಲಸ ನಿಲ್ಲಿಸುವುದಿಲ್ಲ. ನೀವು ಸಿಂಹಸದೃಶರಾಗುವಿರಿ. ನಾವು ಭರತಖಂಡವನ್ನು, ಇಡೀ ವಿಶ್ವವನ್ನು ಹುರಿದುಂಬಿಸಿ ಪ್ರಚೋದಿಸಬೇಕು.... ಅವಶ್ಯವಿದ್ದಲ್ಲಿ ನನ್ನ ಸುತರು ಕಾರ್ಯಸಾಧನೆಗಾಗಿ ಅಗ್ನಿಗೆ ಧುಮುಕಲೂ ಸಿದ್ಧರಾಗಿರಬೇಕು.

— ಸ್ವಾಮಿ ವಿವೇಕಾನಂದ

## ಯುವಶಕ್ತಿಯನ್ನು ರಚನಾತ್ಮಕವಾಗಿ ಬಳಸಿಕೊಳ್ಳುವುದು ಹೇಗೆ ?

ಒಂದು ನದಿಯನ್ನು ತಂತಾನೆ ಹರಿಯಲು ಬಿಟ್ಟಾಗ, ಪ್ರವಾಹ ಬಂದರೆ ಹೊಲಗದ್ದೆಗಳನ್ನು ಹಾಳುಮಾಡುತ್ತದೆ, ಮನೆಗಳನ್ನು ಮುಳುಗಿಸುತ್ತದೆ. ಅದೇ ನದಿಗೆ ಅಣೆಕಟ್ಟು ಕಟ್ಟಿ ಸರಿಯಾದ ಪ್ರಮಾಣದಲ್ಲಿ ನೀರು ಹಾಯಿಸಿದಾಗ ಲಕ್ಷಾಂತರ ಎಕರೆ ಪ್ರದೇಶದಲ್ಲಿ ಬೆಳೆ ಬೆಳೆಯಬಹುದು, ಜಲವಿದ್ಯುತ್‌ನಿಂದ ಮನೆ ಬೆಳಗಬಹುದು.

ಯುವಶಕ್ತಿಯೂ ಒಂದು ನದಿಯಂತೆ. ನಿಯಂತ್ರಣವಿಲ್ಲದಾಗ ಗಲಭೆ, ದೊಂಬಿ, ಲೂಟಿ ಮಾಡಬಹುದಾದ ಯುವಕರು ಸರಿಯಾದ ಮಾರ್ಗದರ್ಶನದಲ್ಲಿ ದೇಶವನ್ನು ಕಾಯುವ ಸೈನಿಕರಾಗುವರು, ಅನ್ನ ನೀಡುವ ರೈತರಾಗುವರು, ಪ್ರಗತಿಪಥದಲ್ಲಿ ನಡೆಸುವ ವಿಜ್ಞಾನಿಗಳಾಗುವರು.

ಯುವಶಕ್ತಿಯನ್ನು ರಚನಾತ್ಮಕವಾಗಿ ಬಳಸಿಕೊಳ್ಳಲು ಮೂರು ಮುಖ್ಯ ಅಂಶಗಳು ಅಗತ್ಯ :

(i) ಉತ್ತಮ ಗುರಿ : ಇಂದಿನ ಯುವಕರಿಗೆ ಸರಿಯಾದ ಗುರಿಯಿಲ್ಲ. ಕೆಲ ವಿದ್ಯಾರ್ಥಿಗಳ ಗುರಿ ಓದಿ ವಿದೇಶಕ್ಕೆ ಹೋಗಿ ಹಣ ಮಾಡುವುದಾದರೆ, ಹಣವಂತ ಕುಟುಂಬದಿಂದ ಬಂದವರ ಗುರಿ ಕಾಲೇಜಿನಲ್ಲಿ ಮೋಜುಮಾಡುವುದು. ಪ್ರತಿಯೊಬ್ಬರೂ ತಮ್ಮ ಗುರಿಯಲ್ಲಿ ಮುನ್ನಡೆಯುತ್ತಲೇ ಇರುತ್ತಾರೆ. ಮಾತೃಭೂಮಿಯ ಭಕ್ತಿಯನ್ನು ಅವರಲ್ಲಿ ತುಂಬಿ, ಭಾರತವನ್ನು ಸರ್ವಾಂಗೀಣ-ಅಭಿವೃದ್ಧಿಪಡಿಸುವ ಆದರ್ಶ ಗುರಿಯನ್ನು ಯುವಕರಿಗೆ ನೀಡಬೇಕಿದೆ.

(ii) ಉತ್ತಮ ಗುರು : ಗುರಿಯೆಡೆಗೆ ಸಾಗುವಾಗ ಎಡುವುವವರನ್ನು

ಎತ್ತಿ ಹುರಿದುಂಬಿಸಿ ಮುನ್ನುಗ್ಗಿಸುವ, ಬೆನ್ನಹಿಂದೆ ಬೆಂಬಲವಾಗಿ ನಿಲ್ಲುವ ಉತ್ತಮ ಗುರುವಿನ ಅಗತ್ಯ ಬಹಳ.

**(iii) ಉತ್ತಮ ನಾಯಕ** : ಗುರಿಯೆಡೆಗೆ ನಡೆಯಲು ಯುವ ಶಕ್ತಿಗೆ ಅದೇ ದಿಕ್ಕಿನಲ್ಲಿ ಮುನ್ನುಗ್ಗುತ್ತಿರುವ ನಾಯಕರ ಅಗತ್ಯ ಇದೆ. **ಯಥಾ ರಾಜಾ ತಥಾ ಪ್ರಜಾ** ಎನ್ನುವಂತೆ ಮುನ್ನುಗ್ಗುವ ನಾಯಕರಿದ್ದರೆ ಯುವಶಕ್ತಿ ಜಾಗೃತವಾಗಿ ಗುರಿಯತ್ತ ನಡೆಯುವುದು ನಿಶ್ಚಿತ.

— ವಿಶ್ವನಾಥ. ಎ., ದ್ವಿತೀಯ ವರ್ಷದ ಕಾನೂನು ಪ್ರಾಸಂಗ.

**ಯುವಕರ ಶಕ್ತಿ** ಸಾಮರ್ಥ್ಯಗಳಿಗೇನು ಕಡಿಮೆಯೇ? ಖಂಡಿತ ಇಲ್ಲ. ಅವರು ದೇಶದ ಮುಂದಿನ ನಾಯಕರು. ಅವರು ದೇಶದ ಮುಂದಿನ ದಾರಿದೀಪಗಳು, ಅವರ ಶಕ್ತಿ ಅಪರಿಮಿತ. ಯಾವುದೇ ವ್ಯವಸ್ಥೆಯನ್ನು ಅಲ್ಲಾಡಿಸುವ ಶಕ್ತಿ ಅವರಲ್ಲಿದೆ. ಆದರೂ ದೇಶದ ಪರಿಸ್ಥಿತಿ ಹೀಗೇಕೆ ಇದೆ? ಕಾರಣ ಯುವಶಕ್ತಿಯನ್ನು ಒಂದು ನಿರ್ದಿಷ್ಟವಾದ ಚೌಕಟ್ಟಿನಲ್ಲಿ ಉಪಯೋಗಿಸದೆ ಅದನ್ನು ಪೋಲು ಮಾಡುತ್ತಿರುವುದು. ಇಂದಿನ ಯುವಶಕ್ತಿ ಬೇಕಿರುವುದು ರಾಷ್ಟ್ರ ನಿರ್ಮಾಣದಲ್ಲಿ, ವಿಧ್ವಂಸಕ ಕೃತ್ಯಗಳಲ್ಲಲ್ಲ. ಒಮ್ಮೆ ಯೋಚಿಸಿ ನೋಡಿದರೆ ಇಂದಿನ ಯುವಕರು ಸರಿಯಾದ ಮುಖಂಡತ್ವವಿಲ್ಲದೆ ಅವರು ಗಲಭೆ ಗೂಂಡಾಗಿರಿಯತ್ತ ತಿರುಗುತ್ತಿರುವುದನ್ನು ಕಾಣಬಹುದು.

ಅವರನ್ನು ಮೊದಲು ಒಂದುಗೂಡಿಸಲು ಕೆಲಸ ಆರಂಭಿಸಬೇಕು. ಅವರ ಶಕ್ತಿಯನ್ನು, ಅವರಲ್ಲಿರುವ ಪ್ರತಿಭೆಯನ್ನು ಅವರಿಗೆ ತೋರಿಸುವ ಕೆಲಸ ಆರಂಭಿಸಬೇಕು. ಈ ರೀತಿ ಮಾಡಲು ಒಂದು ಪ್ರಧಾನವಾದ, ರಾಜಕೀಯರಹಿತ ಮತ್ತು ಯುವಕರನ್ನೇ ಪ್ರಧಾನವಾಗಿಟ್ಟುಕೊಂಡಿರುವ ಸಂಸ್ಥೆಯ ಅಗತ್ಯವಿದೆ. ಆ ಸಂಸ್ಥೆಯ ಮೂಲಕ ಯುವಕರಿಗೆ ವ್ಯಕ್ತಿತ್ವವಿಕಸನ ಮತ್ತು ಸಾಮಾಜಿಕ ಹೊಣೆಯ ಬಗ್ಗೆ ತಿಳಿವಳಿಕೆ ನೀಡಬೇಕು. ಅವರ ಪ್ರತಿಭೆಯನ್ನು ಗುರುತಿಸಿ ಅವರನ್ನು ಅವರ ರಂಗಗಳಲ್ಲಿ ನೈಪುಣ್ಯತೆ ಹೊಂದುವಂತೆ ಮಾಡಿದಲ್ಲಿ ತಾನೇ ತಾನಾಗಿ ರಾಷ್ಟ್ರಾಭಿವೃದ್ಧಿ ಸಾಧ್ಯ. ಇದು ಆದಷ್ಟು ಮಟ್ಟಿಗೆ ರಾಜಕೀಯದಿಂದ ದೂರವಿರಬೇಕು. ನೈತಿಕತೆಯ ಮತ್ತು ಆತ್ಮವಿಶ್ವಾಸದ ಬಗ್ಗೆ ಅವರಿಗೆ ಸರಿಯಾಗಿ ಬೋಧಿಸಿದಲ್ಲಿ ಯುವಶಕ್ತಿಯಿಂದ ರಚನಾತ್ಮಕವಾಗಿ ಕಾರ್ಯ ನಡದೇ ನಡೆಯುತ್ತದೆ.

— ಹರ್ಷ. ಡಿ.ಕೆ., ತೃತೀಯ ಬಿ.ಎಸ್.ಸಿ.
ಯುವರಾಜ ಕಾಲೇಜು, ಮೈಸೂರು.

ವಿವೇಕಾನಂದರು ಒಂದೆಡೆ ಹೀಗೆ ಹೇಳುತ್ತಾರೆ, 'ಸಿಂಹಸದೃಶವಾದ ಶಕ್ತಿಯುಳ್ಳ, ಉತ್ಸಾಹೀ ಯುವಕರು ಕೇವಲ ನೂರು ಜನರು ಸಿಕ್ಕರೆ ದೇಶವನ್ನು ಸುಂದರ ರಾಷ್ಟ್ರವನ್ನಾಗಿಸಬಲ್ಲೆ.' ಎಂದು. ಈ ವಾಕ್ಯ ಯುವಶಕ್ತಿಯಲ್ಲಿ ಅಗಾಧವಾದ ಶಕ್ತಿಯನ್ನು ತೋರಿಸುವುದಲ್ಲದೆ, ಪರೋಕ್ಷವಾಗಿ ಇಂದು ನಮ್ಮ ದೇಶ ಈ ದುಃಸ್ಥಿತಿಯಲ್ಲಿರಬೇಕಾದರೆ ಯುವಜನತೆಗೆ ಮಾರ್ಗದರ್ಶನದ ಕೊರತೆ ಎಷ್ಟಿದೆ ಎಂದೂ ಹೇಳುವಂತಿದೆ.

ವಿದ್ಯಾರಣ್ಯರು ಹಕ್ಕ-ಬುಕ್ಕರೆಂಬ ಯುವಕರಿಗೆ ಮಾರ್ಗದರ್ಶನ ಮಾಡಿ ಐತಿಹಾಸಿಕ ಸುಪ್ರಸಿದ್ಧ ವಿಜಯನಗರವನ್ನು ಸೃಷ್ಟಿಸಿದರು. ಅಂದರೆ ಯುವಜನತೆಯಲ್ಲಿ ಉಕ್ಕಿ ಹರಿಯುವ ಉತ್ಸಾಹಕ್ಕೆ, ಶಕ್ತಿಗೆ ಕಾಲುವೆ ಕಟ್ಟಿ ಮಾರ್ಗದರ್ಶನ ಮಾಡಿ ಬಳಸಿಕೊಳ್ಳಬಲ್ಲ ಚತುರತೆ ಬೇಕಾಗಿದೆ.

ಯುವಶಕ್ತಿಯನ್ನು ರಚನಾತ್ಮಕವಾಗಿ ಬಳಸಿಕೊಳ್ಳಲು ಇಂದಿನ ಶಿಕ್ಷಣದೊಂದಿಗೆ ಜೀವನವನ್ನೆದುರಿಸುವ, ತಮ್ಮ ಧರ್ಮ ಸಂಸ್ಕೃತಿಯ ಮಹತ್ವ ಸಾರುವ, ದೇಶೋದ್ಧಾರಕ್ಕಾಗಿ ಸದಾಸಿದ್ಧವಾಗಿರುವ ಮನಸ್ಸನ್ನು ಮೂಡಿಸಬಲ್ಲ ತಯಾರಿ ಬೇಕಾಗಿದೆ. ಕಠಿಣ ಸಂದರ್ಭವನ್ನು ಮನಶ್ಶಾಂತಿ ಕಳೆದುಕೊಳ್ಳದೆ ಧೈರ್ಯದಿಂದ ಎದುರಿಸುವ ಮತ್ತು ಅದನ್ನೂ ಸಹ ಒಂದು ಒಳ್ಳೆಯ ಗುಣ ಕಲಿಯಲು ಬಳಸಿಕೊಳ್ಳಬಲ್ಲ ಚಾಕಚಕ್ಯತೆ ಕಲಿಸಬೇಕಾಗಿದೆ.

—ಶಿರಿದೇವಿ. ಹೆಚ್. ಎಸ್., ತೃತೀಯ ಬಿ. [illegible]
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

**ಯುವಶಕ್ತಿಯು** ದೇಶದ ಆಸ್ತಿ ಮತ್ತು ಶಕ್ತಿ. ನಮ್ಮ ಯುವಜನತೆಗೆ ಸರಿಯಾದ ಮಾರ್ಗದರ್ಶನ ಕೊಟ್ಟು, ಸರಿಯಾದ ರೀತಿಯಲ್ಲಿ ಬಳಸಿಕೊಂಡಾಗ ದೇಶಕ್ಕೆ ಹೆಚ್ಚಿನ ಲಾಭ ಇದೆ. ಯುವಜನತೆಯಲ್ಲಿರುವ ಪ್ರತಿಭೆ, ಆಸಕ್ತಿಯನ್ನು ಗುರುತಿಸಿ ಅವರಿಗೆ ತಕ್ಕ ಪ್ರೋತ್ಸಾಹವನ್ನು ಒದಗಿಸಬೇಕು. ಯುವಜನತೆಯಲ್ಲಿ ದೇಶಪ್ರೇಮ, ದೇಶಭಕ್ತಿಯನ್ನು ಹೆಚ್ಚಿಸಿ, ದೇಶಕ್ಕಾಗಿ ಸರ್ವತೋಮುಖವಾಗಿ ದುಡಿಯುವಂತೆ ಮಾಡಬೇಕು. ರಾಷ್ಟ್ರೀಯ ಹಬ್ಬಗಳ ಆಚರಣೆ, ರಾಷ್ಟ್ರಗೀತೆಯ ಹಾಡುವಿಕೆ ಇವೆಲ್ಲವನ್ನೂ ಎಲ್ಲಾ ಸೇರಿ ಒಂದೇ ಸೂರಿನಡಿ ಆಚರಿಸುವುದರಿಂದ ಯುವಜನತೆಯಲ್ಲಿ ಐಕ್ಯತೆಯ ಭಾವನೆ ಹೆಚ್ಚಾಗುತ್ತದೆ. ಯುವಕರು ತಾವೇ ಸಂಘ ಸಂಸ್ಥೆಗಳನ್ನು ಕಟ್ಟಿ, ಸ್ವಯಂಪ್ರೇರಿತರಾಗಿ ದೇಶಕ್ಕಾಗಿ ದುಡಿಯುವಂತೆ ಮಾಡಬಹುದು. ಯುವಜನತೆಗೆ ಹೆಚ್ಚಾಗಿ ಸ್ವಯಂ ಉದ್ಯೋಗ ಮಾಡಲು ಹೆಚ್ಚಿನ ಅವಕಾಶ ಕೊಡಬೇಕು. ಯುವಜನರಲ್ಲಿರುವ ಕ್ರೀಡಾಸಕ್ತಿಯನ್ನು ಗಮನಿಸಿ ಅವರಿಗೆ ಪ್ರೋತ್ಸಾಹ ನೀಡಿ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡಬೇಕು. ವಿಜ್ಞಾನರಂಗದಲ್ಲಿ ಹೆಚ್ಚಿನ ಯುವಜನತೆ ದುಡಿಯುವಂತೆ ನೋಡಿಕೊಂಡು ಅವರಿಗೆ ಬೇಕಾದ ಸಹಾಯ, ಸೌಕರ್ಯಗಳನ್ನು ಒದಗಿಸಿ ಹೊಸ, ಹೊಸ ಆವಿಷ್ಕಾರಗಳನ್ನು ಮಾಡುವಂತೆ ನೋಡಿಕೊಳ್ಳುವುದು. ಕಲೆ, ಸಾಹಿತ್ಯ ರಂಗದಲ್ಲಿಯೂ ಯುವಜನತೆ ಸಮಾನ ಆಸಕ್ತಿಯಿಂದ ಭಾಗವಹಿಸುವಂತೆ ನೋಡಿಕೊಳ್ಳಬೇಕು. ದೇಶದ ಬೆನ್ನೆಲುಬಾದ ವ್ಯವಸಾಯದಲ್ಲಿಯೂ ಹೆಚ್ಚಿನ ಯುವಜನತೆ ದುಡಿಯುವಂತೆ ಪ್ರೋತ್ಸಾಹಿಸಿ, ಆಧುನಿಕ ರೀತಿಯಲ್ಲಿ ಬೇಸಾಯ ಮಾಡಿ, ಹೆಚ್ಚಿನ ಇಳುವರಿ ತೆಗೆಯಲು ಬೇಕಾದ ಮಾರ್ಗಗಳನ್ನು ಅನುಸರಿಸಲು ಅವರಿಗೆ ಸರಿಯಾದ ತಿಳುವಳಿಕೆ ಕೊಡಬೇಕು. ದೇಶ ಸಂಕಷ್ಟಗಳಲ್ಲಿದ್ದಾಗ ಹೆಚ್ಚಿನ ಯುವಜನತೆ ಮುಂದೆ ಬಂದು ಸ್ವಯಂಪ್ರೇರಿತರಾಗಿ ದುಡಿಯುವಂತೆ ನೋಡಿಕೊಳ್ಳಬೇಕು. ಹೀಗೆ ಯುವಜನತೆಯನ್ನು ರಚನಾತ್ಮಕವಾಗಿ ಬಳಸಿಕೊಳ್ಳಬಹುದು.

—ಭಾಗ್ಯಲಕ್ಷ್ಮಿ. ಎಚ್., ಅಂತಿಮ [illegible]
ಮಹಾರಾಣಿ ಮಹಿಳಾ [illegible]